ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಡಿ ಪಿ ಎ ಆರ್.

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 13/12/2019

# ನಾಲ್ಕನೇ ಶನಿವಾರ ರಜೆಗೆ ಕತ್ತರಿ



## ಸರ್ಕಾರಿ ನೌಕರರಿಗೆ ಕಹಿ ಸುದ್ದಿ

ಸಂ.ಕ. ಸಮಾಚಾರ ಬೆಂಗಳೂರು, 13-12-19 ರಾಜ್ಯಸರ್ಕಾರಿ ನೌಕರರಿಗೆ ಇನ್ನು ಮುಂದೆ ನಾಲ್ಕನೇ ಶನಿವಾರ ರಜೆ ಇಲ್ಲ. ಈ ಮುಂಚೆ ತಿಂಗಳಿಗೆ ಎರಡು ಶನಿವಾರ ಸೇರಿ ನಾಲ್ಕು ಭಾನುವಾರಗಳ ರಜೆ ಅನುಭವಿಸುತ್ತಿದ್ದ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರ ಶಾಕ್ ನೀಡಿದೆ. ತಿಂಗಳ ಎರಡನೇ ಮತ್ತು ನಾಲ್ಕನೇ ಶನಿವಾರ ಸರ್ಕಾರಿ ರಜೆ ನೀಡಲಾಗಿತ್ತು. ಆದರೆ ಹೊಸತಾಗಿ ಹೊರಡಿಸಿರುವ ಸುತ್ತೋಲೆಯ ಪ್ರಕಾರ ಇನ್ನು ಮುಂದೆ ತಿಂಗಳ ಎರಡನೇ ಶನಿವಾರ ಮಾತ್ರವೇ ಸರ್ಕಾರಿ ರಜೆ ಇರಲಿದೆ. ನಾಲ್ಕನೇ ಶನಿವಾರ ಮಾಮೂಲಿನಂತೆ ಉದ್ಯೋಗ ಮಾಡಬೇಕಾಗಿದೆ.

ಪ್ರಸಕ್ತ ವರ್ಷ ಮಂಜೂರು ಮಾಡಲಾಗಿರುವ ರಜಾದಿನಗಳ ಅಧಿಸೂಚನೆ ಅನ್ವಯ ನಾಲ್ಕನೇ ಶನಿವಾರ ರಜೆ ಎಂದು ಹೇಳಲಾಗಿತ್ತು. ಆದರೆ ಹೊಸ ಸುತ್ತೋಲೆಯಂತೆ ನಾಲ್ಕನೇ ಶನಿವಾರದ ರಜೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಮಾಡಲಾಗಿದೆ.